# ಲೆಕ್ಕ ಪತ್ರ ಶಾಖೆ

ಕೈಗಾರಿಕಾ ತರಬೇತಿ ಮತ್ತು ಉದ್ಯೋಗ ಆಯುಕ್ತಾಲಯದಲ್ಲಿ ತರಬೇತಿ ಮತ್ತು ಉದ್ಯೋಗ ಎಂದು ಎರಡು ಪ್ರತ್ಯೇಕ ವಿಭಾಗಗಳಿದ್ದು, ಎರಡೂ ವಿಭಾಗಗಳಿಗೆ ಸಂಬಂಧಿಸಿದಂತೆ ಲೆಕ್ಕ ಪತ್ರ ಶಾಖೆಯು ಕೆಲವು ಕಾಯಕ್ರಮಗಳ ಆಯವ್ಯಯ ಮತ್ತು ವೆಚ್ಚಗಳನ್ನು ನೋಡಿಕೊಳ್ಳುತ್ತದೆ.

ಲೆಕ್ಕ ಪತ್ರ ಶಾಖೆಯಲ್ಲಿ ಇಲಾಖೆಯ ಆಯುಕ್ತಾಲಯವೂ ಒಳಗೊಂಡಂತೆ ತರಬೇತಿ ವಿಭಾಗದ ೨೭೦ ಸಕಾರಿರಿ ಕೈಗಾರಿಕಾ ತರಬೇತಿ ಸಂಸ್ಥೆಗಳು, ೪ ವಿಭಾಗೀಯ ಕಛೇರಿಗಳಾದ ಬೆಂಗಳೂರು, ಹುಬ್ಬಳ್ಳಿ, ಮೈಸೂರು ಮತ್ತು ಗುಲ್ಬರ್ಗ, ಸ್ಟಾಕ್ ಮಳವಳ್ಳಿ, ಐಟಿಒಟಿ, ದಾವಣಗೆರೆ, ಉದ್ಯೋಗ ವಿಭಾಗದ 40 ಅಧೀನ ಕಛೇರಿಗಳ ವೆಚ್ಚದ ವಿವರಗಳು ಹಾಗೂ ಖಾಸಗಿ ಅನುದಾನಿತ ಕೈಗಾರಿಕಾ ತರಬೇತಿ ಸಂಸ್ಥೆಗಳು, ನಬಾರ್ಡ್ ಹಾಗೂ 02 ವಿವಿಧ ವಿಭಾಗಗಳಿಂದ ನೀಡುವ ಅನುದಾನ ಬಿಡುಗಡೆ ಆದೇಶಗಳಂತೆ ಅಪ್ಲೋಡ್, ಖಚುರಿ ವೆಚ್ಚಗಳನ್ನು ನಿವರಿಹಿಸಲಾಗುತ್ತದೆ.

ಲೆಕ್ಕ ಪತ್ರ ಶಾಖೆಯಲ್ಲಿ ತರಬೇತಿ ಮತ್ತು ಉದ್ಯೋಗ ಎರಡೂ ವಿಭಾಗಗಳ ಎಲ್ಲ ಅಧೀನ ಕಛೇರಿಗಳ ವೇತನ ಬಾಬ್ತುಗಳಿಗೆ ಅವಶ್ಯಕವಿರುವ ಅನುದಾನದ ಬಿಡುಗಡೆಗಾಗಿ ಪ್ರತಿ ವರ್ಷ ಮಂಜೂರಾಗಿರುವ ಹುದ್ದೆಗಳ ಮಾ»ತಿಯನ್ನು ಹೆಚ್.ಆರ್.ಎಂ.ಎಸ್ ಪೋರ್ಟಲ್ ಗೆ ಅಪ್ಲೋಡ್ ಮಾಡಲಾಗುತ್ತದೆ. ಹಾಗೂ ಸದರಿ ವಿವರಗಳನ್ನು ಸರ್ಕಾರಕ್ಕೆ/ ಆರ್ಥಿಕ ಇಲಾಖೆUÉ ಸಲ್ಲಿಸಲಾಗುತ್ತದೆ. ವಿವಿಧ ಲೆಕ್ಕಶೀರ್ಷಿಕೆಯಲ್ಲಿ ನಾಲ್ಕು ತ್ರೈಮಾಸಿಕಕ್ಕೆ ಸರ್ಕಾರದಿಂದ ಬಿಡುಗಡೆಯಾಗಿರುವ ಆಯವ್ಯಯವನ್ನು ಎಲ್ಲಾ ಅಧೀನ ಕಛೇರಿಗಳಿಗೆ ಬೇಡಿಕೆಗೆ ತಕ್ಕಂತೆ ಬಿಡುಗಡೆ ಮಾಡಲಾಗುತ್ತದೆ. ಪ್ರಸ್ತುತ ಸದರಿ ಕಾರ್ಯವನ್ನು ಖಜಾನೆ-2 ರಲ್ಲಿ ನಿರ್ವಹಿಸಲಾಗುತ್ತದೆ.

ಬಿಡುಗಡೆಯಾದ ಅನುದಾನಕ್ಕೆ ಖರ್ಚು ವೆಚ್ಚದ ಪಟ್ಟಿಯನ್ನು ಪ್ರತಿ ತಿಂಗಳೂ ಪ್ರತಿ ಕಛೇರಿಯಿಂದಲೂ ಪಡೆದು, ಕ್ರೋಢೀಕರಿಸಿ ಮಹಾಲೇಖಪಾಲಕರಿಗೆ ವರದಿ ಸಲ್ಲಿಸಲಾಗುವುದು. ಅಲ್ಲದೆ ಖಚುರಿ ವೆಚ್ಚದ ಪಟ್ಟಿಯನ್ನು ಹಾಗೂ ರಾಜಸ್ವ ವೆಚ್ಚವನ್ನು ಮಹಾಲೇಖಪಾಲಕರ ಲೆಕ್ಕಕ್ಕೆ ಮರುಹೊಂದಾಣಿಕೆ ಮಾಡಿಕೊಳ್ಳಲಾಗುತ್ತದೆ. ವ್ಯಾತ್ಯಾಸ ಕಂಡು ಬಂದಲ್ಲಿ ಮಹಾಲೇಖಪಾಲರಿಗೆ ವ್ಯತ್ಯಾಸದ ವಿವರಗಳನ್ನು ನೀಡಲಾಗುತ್ತದೆ.

ಮಹಾಲೇಖಪಾಲರು ಕೈಗೊಳ್ಳುವ ಇಲಾಖೆಯ ವಿವಿಧ ಕಛೇರಿಗಳ ಆಡಿಟ್ ವರದಿಯನ್ನು ಪಡೆದುಕೊಂಡು ಸಂಬಂದಪಟ್ಟವರಿಂದ ಸೂಕ್ತ ಅನುಸರಣಾ ಉತ್ತರವನ್ನು ಪಡೆದು ಕ್ರೋಢೀಕರಿಸಿ ಮಹಾಲೇಖಪಾಲರಿಗೆ ಸಲ್ಲಿಸಲಾಗುತ್ತದೆ.

ಇದಲ್ಲದೆ ಇಲಾಖಾ ಆಂತರಿಕ ಲೆಕ್ಕ ಪರಿಶೋಧನೆ ಕೋಶವು ರಾಜ್ಯದ ಎಲ್ಲಾ 270 ಸಕಾರಿ ಕೈಗಾರಿಕಾ ತರಬೇತಿ ಸಂಸ್ಥೆಗಳು ಮತ್ತು 196 ಅನುದಾನಿತ ಕೈಗಾರಿಕಾ ತರಬೇತಿ ಸಂಸ್ಥೆಗಳು ಹಾಗೂ ಉದ್ಯೋಗ ವಿಭಾಗದ 40 ಅಧೀನ ಕಛೇರಿಗಳ ಲೆಕ್ಕ ಪರಿಶೋಧನೆ ಕೈಗೊಳ್ಳಲಾಗುತ್ತದೆ. ಈ ಬಗ್ಗೆ ಕಛೇರಿ ಮುಖ್ಯಸ್ಥರು/ಬಟವಾಡೆ ಅಧಿಕಾರಿಗಳಿಗೆ ಎಲ್ಲಾ ರೀತಿಯಲ್ಲಿ ಸೂಕ್ತ ಮಾರ್ಗದರ್ಶನ ನೀಡಲಾಗುತ್ತದೆ. ಹಾಗೂ ಆರ್ಥಿಕ ಅಪವ್ಯಯವಾಗಿದ್ದಲ್ಲಿ ಇಲಾಖೆಯ ಮುಖ್ಯಸ್ಥರ ಗಮನಕ್ಕೆ ತರಲಾಗುತ್ತದೆ. ಹಾಗೂ ಸೂಕ್ತ ಕ್ರಮಕ್ಕೆ ಶಿಫಾರಸ್ಸು ಮಾಡಲಾಗುತ್ತದೆ.

ತರಬೇತಿ ವಿಭಾಗ ಮತ್ತು ಉದ್ಯೋಗ ವಿಭಾಗದ ಎಲ್ಲಾ ಅಧೀನ ಕಛೇರಿಗಳಿಂದ ಬಟವಾಡೆ ಅಧಿಕಾರಿಗಳ ಆಥಿರ್ಕ ವ್ಯಾಪ್ತಿಗೆ ಮೀರಿ ಬರುವ ಎಲ್ಲಾ ತರಹದ ಬಿಲ್ಲುಗಳನ್ನು ನಿಯಮಾನುಸಾರ ಪರಿಶೀಲಿಸಿ ಆಯುಕ್ತರ ಪರವಾಗಿ ಮೇಲು ಸಹಿ ಮಾಡಿ ಕಳುಹಿಸಲಾಗುತ್ತದೆ.

2021-22 ನೇ ಸಾಲಿನ ಆರ್ಥಿಕ ವರ್ಷಕ್ಕೆ ವಿವಿಧ ಲೆಕ್ಕ ಶೀರ್ಷಿಕೆಗಳಿಗಾಗಿ ಸರ್ಕಾರದಿಂದ ಬಿಡುಗಡೆಯಾಗಿರುವ ಆಯವ್ಯಯ ಹಾಗೂ ಏಪ್ರಿಲ್ 2021 ರಿಂದ ಮಾರ್ಚ್2022 ರ ವರೆಗಿನ ವೆಚ್ಚದ ವಿವರಗಳನ್ನು ಈ ಕೆಳಕಂಡಂತೆ ನೀಡಲಾಗಿದೆ.

ರೂ ಲಕ್ಷಗಳಲ್ಲಿ

| ಕ್ರ. ಸಂ | ಕಾರ್ಯಕ್ರಮದ ಹೆಸರು ಮತ್ತು ಲೆಕ್ಕ ಶೀರ್ಷಿಕೆ | 2021-22 ನೇ ಸಾಲಿಗೆ ಬಿಡುಗಡೆಯಾದ ಅನುದಾನ | ಏಪ್ರಿಲ್ 2021 ರಿಂದ ಮಾರ್ಚ್ 2022 ವರೆಗಿನ ವೆಚ್ಚ |
|---|---|---|---|
| 1 | 2230-02-101-0-10 ಸಾಮಾನ್ಯ ಉದ್ಯೋಗ ವಿನಿಮಯ ಕೇಂದ್ರಗಳು | 813.00 | 693.75 |
| 2 | 2230-03-101-0-48 ಸಹಾಯಾನುದಾನದ ಕೈ.ತ.ಕೇಂದ್ರಗಳು | 12967.00 | 12886.86 |
| 3 | 2230-03-101-0-50 ರಾಜ್ಯ ತರಬೇತಿ ಮತ್ತು ಸಂಶೋದನಾ ಕೇಂದ್ರ | 135.50 | 96.83 |
| 4 | 2230-03-101-0-56 ವೃತ್ತಿಪರ ತರಬೇತಿ ಸುಧಾರಣೆ ಯೋಜನೆಯಡಿ ಮಾಗದರ್ಶಿ ತರಬೇತಿ ವಿಭಾಗಗಳ ಸ್ಥಾಪನೆ | 109.00 | 91.16 |

| | | | |
|---|---|---|---|
| 5 | 4250-00-203-0-07<br>ಐ ಟಿಐ ಗಳ ನಿರ್ಮಾಣ | 5500.00 | 4734.58 |

ಏಪಿಲ್ 2021 ರಿಂದ ಮಾಚ್ 2022 ರವರೆಗೆ 8032 ಬಿಲ್ಲುಗಳು ಮೇಲುಸಹಿಗಾಗಿ ಬಂದಿದ್ದು, ಸದರಿ ಬಿಲ್ಲುಗಳನ್ನು ಲೆಕ್ಕ ಪತ್ರ ವಿಭಾಗದ ಕತವ್ಯದ ಜೊತೆ ಹೆಚ್ಚುವರಿಯಾಗಿ ನಿವಹಿಸಿ ನಿಗದಿತ ಅವದಿಯಲ್ಲಿ ಇತ್ಯರ್ಥಪಡಿಸಲಾಗಿದೆ.

ದಿ.01/09/2016 ರಿಂದ ಇಲಾಖೆಯ ಎಲ್ಲಾ ಆಥಿಕ ವಹಿವಾಟುಗಳನ್ನು ಖಜಾನೆ-2 ಅನುಕಲನ ಹಣಕಾಸು ನಿರ್ವಹಣೆ ವ್ಯವಸ್ಥೆಯಲ್ಲಿ ನಿರ್ವಹಿಸಲಾಗುತ್ತದೆ.